ದಿನಾಂಕ: 05.03.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

## ಪಾಟೀಸವಾಲು: ಪ್ರತಿವಾದಿಯರ ಪರ ಶ್ರೀ.ಕೆ.ಎನ್.ಎಸ್. ವಕೀಲರಿಂದ:

ನನಗೆ ಓದಲು ಬರೆಯಲು ಸುಮಾರಾಗಿ ಬರುತ್ತದೆ. ಜಯರಾಮೇಗೌಡ/ಪ್ರತಿವಾದಿ ನನ್ನ ತಮ್ಮ. ನನ್ನ ಹಾಗೂ ಪ್ರತಿವಾದಿಯ ಮದ್ಯ 4 ದಾವೆಗಳು ಇರುತ್ತವೆ ಎಂದರೆ ಸರಿ. ನಮ್ಮಿಬ್ಬರ ಮದ್ಯ ಪ್ರಕರಣಗಳು ಸಹ ಠಾಣೆಯಲ್ಲಿ ದಾಖಲು ಆಗಿರುತ್ತವೆ ಎಂದರೆ ಸರಿ. ಹಣವನ್ನು ಹಿಂಪಡೆಯುವ ಸಲುವಾಗಿ ಸದರಿ ದಾವೆಯನ್ನು ಪ್ರತಿವಾದಿಯ ವಿರುದ್ದ ದಾಖಲು ಮಾಡಿರುತ್ತೇನೆ ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ದಿನಾಂಕ 11.12.2017 ರಂದು ತಾಲ್ಲೂಕು ಕಚೇರಿಯ ಬಳಿ ಹಣವನ್ನು ಪ್ರತಿವಾದಿಗೆ ನೀಡಿರುತ್ತೇನೆ. ರೆಷ್ಮೆ ಸಾಕಾಣಿಕೆಯಿಂದ ಆದಾಯ ಬಂದಿದ್ದು ಸದರಿ ಹಣವನ್ನು ಪ್ರತಿವಾದಿಗೆ ನೀಡಿರುತ್ತೇನೆ ಇದರ ಸಂಬಂಧವಾಗಿ ದಾಖಲಾತಿಗಳನ್ನು ಹಾಜರು ಮಾಡಿರುವುದಿಲ್ಲ ಹಾಗೂ ಹಾಜರು ಮಾಡುತ್ತೇನೆ ಎಂದು ನುಡಿಯುತ್ತಾರೆ. ಪತ್ರ ಬರೆಯುವ ಸಂದರ್ಭದಲ್ಲಿ ನನ್ನ ಮಗ ದೇವೆಗೌಡ ಪ್ರತಿವಾದಿ ಹಾಗೂ ನಾನು ಇದ್ದೇನು.

ಮುಂದುವರೆದ ಪಾಟೀ ಸವಾಲು: ಸಮಯ ಕೋರಿದ್ದು ಸಮಯ ನೀಡಿ ಮುಂದುಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.